# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1009 (452)**

**ಸದಸ್ಯರ ಹೆಸರು** : **ಶ್ರೀ ಸಿ. ಎನ್ ಮಂಜೇಗೌಡ**
**( ಸ್ಥಳೀಯ ಸಂಸ್ಥೆಗಳ ಕ್ಷೇತ್ರ )**

**ಉತ್ತರಿಸುವ ದಿನಾಂಕ** : **17.03.2025**

**ಉತ್ತರಿಸುವವರು** : **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವನ್ಯಪ್ರಾಣಿ ಮತ್ತು ಮಾನವ ಸಂಘರ್ಷದಿಂದ ಪ್ರಾಣ ಹಾನಿಗೊಳಗಾದ ಪ್ರಕರಣಗಳ ಸಂಖ್ಯೆ ಎಷ್ಟು.</td><td>ಪ್ರಸಕ್ತ ಸಾಲಿನಲ್ಲಿ ಚಾಮರಾಜನಗರ ಮತ್ತು ಮೈಸೂರು ವೃತ್ತಗಳ ವ್ಯಾಪ್ತಿಯಲ್ಲಿ ವನ್ಯಪ್ರಾಣಿ ಮತ್ತು ಮಾನವ-ಸಂಘರ್ಷದಿಂದ ಪ್ರಾಣಹಾನಿಗೊಳಗಾದ ವಿಭಾಗವಾರು ಸಂಖ್ಯೆಯ ವಿವರ ಈ ಕೆಳಕಂಡಂತಿದೆ.<br><br>
ಚಾಮರಾಜನಗರ :
<table>
<tr><th>ಕ್ರ.ಸಂ</th><th>ವಿಭಾಗ</th><th>ಪ್ರಕರಣಗಳ ಸಂಖ್ಯೆ</th></tr>
<tr><td>1</td><td>ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ</td><td>2</td></tr>
<tr><td>2</td><td>ಮಲೈಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ</td><td>-</td></tr>
<tr><td>3</td><td>ಕಾವೇರಿ ವನ್ಯಜೀವಿ ವಿಭಾಗ ಕೊಳ್ಳೇಗಾಲ</td><td>-</td></tr>
<tr><td colspan="2">ಒಟ್ಟು</td><td>2</td></tr>
</table>
<br>
ಮೈಸೂರು :
<table>
<tr><th>ಕ್ರ.ಸಂ</th><th>ವಿಭಾಗ</th><th>ಪ್ರಕರಣಗಳ ಸಂಖ್ಯೆ</th></tr>
<tr><td>1</td><td>ಮೈಸೂರು</td><td>1</td></tr>
<tr><td>2</td><td>ಹುಣಸೂರು</td><td>1</td></tr>
<tr><td>3</td><td>ಬಂಡೀಪುರ</td><td>2</td></tr>
<tr><td>4</td><td>ಮೈಸೂರು ವ.ಜೀ</td><td>-</td></tr>
<tr><td colspan="2">ಒಟ್ಟು</td><td>4</td></tr>
</table>
</td></tr>
<tr><td>ಆ)</td><td>ವನ್ಯಜೀವಿ ಮತ್ತು ಮಾನವ ಸಂಘರ್ಷ ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು:</td><td>ಚಾಮರಾಜನಗರ ವೃತ್ತ ವ್ಯಾಪ್ತಿಯಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ, ಸೋಲಾರ್ ತಂತಿಬೇಲಿಗಳ ನಿರ್ಮಾಣ ಆನೆ ತಡೆ ಕಂದಕ ನಿರ್ಮಾಣ/ನಿರ್ವಹಣೆ, ವಿಶೇಷ ತಡೆಗೋಡೆ ನಿರ್ಮಾಣ, ಕ್ಷಿಪ್ರ ಕಾರ್ಯಪಡೆ, ಆನೆ ಹಿಮ್ಮೆಟ್ಟಿಸುವ ತಂಡ ಮತ್ತು ಡ್ರೋನ್ ಕ್ಯಾಮೆರಾಗಳನ್ನು ಬಳಸಿ ಅಗತ್ಯ ಕ್ರಮ ವಹಿಸಲಾಗುತ್ತಿದೆ.<br><br>
ಮೈಸೂರು ವೃತ್ತ ವ್ಯಾಪ್ತಿಯ ವಿಭಾಗಗಳಲ್ಲಿ ವನ್ಯಪ್ರಾಣಿಗಳು ಕಾಡಿನಿಂದ ನಾಡಿಗೆ ಬರುವ ಆನೆಗಳು ಮತ್ತು ಇತರೆ ವನ್ಯಪ್ರಾಣಿಗಳನ್ನು ನಿಯಂತ್ರಿಸಲು ತಗೆದುಕೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ.<br><br>
1. ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿರುವ ಗ್ರಾಮಗಳಲ್ಲಿರುವ ರೈತರ ಮೊಬೈಲ್‌ಗಳಿಗೆ wildlife alert advance system ಮುಖಾಂತರ ಮುನ್ನೆಚ್ಚರಿಕೆ ಸಂದೇಶಗಳನ್ನು ನೀಡಲಾಗುತ್ತಿದೆ.<br>
2. ಹುಲಿ ಕಾಣಿಸಿಕೊಂಡಾಗ Special Tiger Protection Force (STPF) ತಂಡದ ಸಹಾಯ ಪಡೆದು ಕಾರ್ಯಾಚರಣೆ ನಡೆಸಿ, ಹುಲಿ ಹಿಮ್ಮೆಟ್ಟಿಸುವುದು ಮತ್ತು ಅವಶ್ಯಕತೆಗೆ ಅನುಸಾರ ಕುಮ್ಕಿ ಆನೆಗಳನ್ನು ಬಳಸಿ ಸೆರೆ ಹಿಡಿದು ಸ್ಥಳಾಂತರಿಸಲಾಗುತ್ತಿದೆ.</td></tr>
</table>

3. ಸರ್ಕಾರಿ ಆದೇಶ ಸಂ: ಅಪಜೀ-116 ಎಫ್ ಎ ಪಿ-2016 ದಿನಾಂಕ:16-09-2016 ರ ಆದೇಶದಂತೆ ಕಾಡಂಚಿನ 5 ಕಿ.ಮೀ. ವ್ಯಾಪ್ತಿಯೊಳಗೆ ವಾಸಿಸುವ ರೈತರು ಬೆಳೆದ ಬೆಳೆಗಳನ್ನು ವನ್ಯ ಪ್ರಾಣಿಗಳ ದಾಳಿಯಿಂದ ರಕ್ಷಿಸಲು ಸೌರ ಶಕ್ತಿಬೇಲಿ ನಿರ್ಮಿಸಲು ಸೋಲಾರ್ 50-50 ಯೋಜನೆಯಡಿ ರೈತರಿಗೆ ಸಹಾಯ ಧನವನ್ನು ನೀಡಲಾಗುತ್ತಿದೆ.
4. ರೈತರ ಜಮೀನುಗಳಲ್ಲಿ ಚಿರತೆ ಕಾಣಿಸಿಕೊಂಡಾಗ ಚಿರತೆಯನ್ನು ಸೆರೆ ಹಿಡಿಯಲು ರೈತರ ಜಮೀನಿನಲ್ಲಿ ಚಿರತೆ ಬೋನುಗಳನ್ನು ಇಟ್ಟು ಚಿರತೆಗಳನ್ನು ಸೆರೆ ಹಿಡಿದು ಸೂಕ್ತ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಲಾಗುತ್ತಿದೆ.
5. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನೇತೃತ್ವದ ಪ್ರತ್ಯೇಕ ಸಿಬ್ಬಂದಿಗಳನ್ನು ಹೊಂದಿರುವ Leopard task Force ರಚನೆ ಮಾಡಲಾಗಿದ್ದು, ಸಿಬ್ಬಂದಿಗಳು ಚಿರತೆ ಹಾವಳಿಗೆ ಸಂಬಂಧಿಸಿದ ದೂರುಗಳು ಬಂದ ತಕ್ಷಣ ಹಾಜರಾಗಿ 24*7 ನಿರಂತರವಾಗಿ ಕ್ರಮ ವಹಿಸುತ್ತಿರುತ್ತಾರೆ.
6. ಹೆಚ್.ಡಿ.ಕೋಟೆ ಸುತ್ತಮುತ್ತ ಹುಲಿ ಚಲನವಲನ ಹೆಚ್ಚಿರುವ ಗ್ರಾಮಗಳಲ್ಲಿನ ದೂರುಗಳಿಗೆ ತತಕ್ಷಣ ಸ್ಪಂದಿಸಲು ಹೆಚ್ಚುವರಿಯಾಗಿ ಡಿಸೆಂಬರ್-2024 ರಿಂದ ಫೆಬ್ರುವರಿ-2025 ರವರೆಗೆ 4 ವಾಚರ್ ಗಳನ್ನು ಹೊಂದಿರುವ 1 ತಾತ್ಕಾಲಿಕ (ADC Camp) ರಚಿಸಲಾಗಿದೆ.
7. ವೃತ್ತ ಮಟ್ಟದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಪ್ರತ್ಯೇಕ ಸಿಬ್ಬಂದಿಗಳನ್ನು ಹೊಂದಿರುವ ಆನೆ ಕಾರ್ಯ ಪಡೆ ರಚನೆ ಮಾಡಲಾಗಿದ್ದು, ಆನೆ ಉಪಟಳಕ್ಕೆ ಸಂಬಂಧಿಸಿದ ದೂರುಗಳು ಬಂದ ತಕ್ಷಣ ಸ್ಥಳಕ್ಕೆ ಹಾಜರಾಗಿ 24*7 ಕ್ರಮಗಳನ್ನು ವಹಿಸುತ್ತಿರುತ್ತಾರೆ.
8. ಅದಲ್ಲದೆ, ವಿಭಾಗದ ವ್ಯಾಪ್ತಿಯಲ್ಲಿ ಪ್ರಾಣಿಗಳು ಕಾಡಂಚಿನ ಗ್ರಾಮಗಳಿಗೆ ಬರುವುದನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ
   - ರೈಲ್ವೆ ಬ್ಯಾರಿಕೇಡ್ ನಿರ್ಮಾಣ
   - ಸೌರ ಬೇಲಿ ನಿರ್ಮಾಣ
   - ಆನೆ ತಡೆ ಕಂದಕ ನಿರ್ಮಾಣ
   - ಸ್ಪೈಕ್ ಗೇಟ್ ನಿರ್ಮಾಣ

ಇ) ಈವರೆಗೆ ಎಷ್ಟು ವನ್ಯಜೀವಿಗಳನ್ನು ಸೆರೆಹಿಡಿಯಲಾಗಿದೆ: (ವಿವರಗಳನ್ನು ಒದಗಿಸುವುದು)

ಚಾಮರಾಜನಗರ ವೃತ್ತದಲ್ಲಿ ಪ್ರಸಕ್ತ ಸಾಲಿನಲ್ಲಿ ಸೆರೆಹಿಡಿಯಲಾದ ವನ್ಯಪ್ರಾಣಿಗಳ ಸಂಖ್ಯಾವಾರು ವಿವರ ಕೆಳಕಂಡಂತಿದೆ.

| **ಕ್ರ. ಸಂ** | **ವಿಭಾಗ** | **ಸೆರೆಹಿಡಿಯಲಾದ ಪ್ರಾಣಿಗಳ ಸಂಖ್ಯೆ** |
|---|---|---|
| 1 | ಬಿ.ಆರ್.ಟಿ. ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ | 2 ಚಿರತೆ |
| 2 | ಮಲೈಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ | 2 ಚಿರತೆ |
| 3 | ಕಾವೇರಿ ವನ್ಯಜೀವಿ ವಿಭಾಗ ಕೊಳ್ಳೇಗಾಲ | - |
| | **ಒಟ್ಟು** | **4** |

ಮೈಸೂರು ವೃತ್ತದಲ್ಲಿ ಕಳೆದ ಮೂರು ವರ್ಷದಲ್ಲಿ ಸೆರೆಹಿಡಿಯಲಾದ ವನ್ಯಪ್ರಾಣಿಗಳ ಸಂಖ್ಯಾವಾರು ವಿವರ ಕೆಳಕಂಡಂತಿದೆ

| **ಕ್ರ.ಸಂ** | **ವಿಭಾಗ** | **ಸೆರೆಹಿಡಿಯಲಾದ ಪ್ರಾಣಿಗಳ ಸಂಖ್ಯೆ** |
|---|---|---|
| 1 | ಮೈಸೂರು | 02 ಹುಲಿ, 104 ಚಿರತೆ |
| 2 | ಹುಣಸೂರು | 47 ಚಿರತೆ, 03 ಆನೆ |
| 3 | ಮೈಸೂರು ವ.ಜೀ | 151 ಚಿರತೆ. |
| 4 | ಬಂಡೀಪುರ | 02 ಹುಲಿ, 04 ಆನೆ |
| | ಒಟ್ಟು | 313 |

| | | |
|---|---|---|
| ಈ) | ಹೀಗೆ ಸೆರೆಹಿಡಿಯಲಾದ ಪ್ರಾಣಿಗಳ ಪುನರ್ವಸತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸೆರೆ ಹಿಡಿಯಲಾದ ವನ್ಯಪ್ರಾಣಿಗಳ ಕುರಿತು ಪಶು ವೈಧ್ಯಾಧಿಕಾರಿಗಳು ನೀಡುವ ದೃಢೀಕರಣ ಪತ್ರದ ಮೇರೆಗೆ ನಿಯಮಾನುಸಾರ ಸದೃಢ ಹಾಗೂ ಆರೋಗ್ಯದಿಂದಿರುವ ವನ್ಯಪ್ರಾಣಿಗಳನ್ನು ಕಾಡಿಗೆ ಬಿಡಲಾಗುತ್ತಿದೆ ಹಾಗೂ ಶುಶ್ರೂಷೆ ಅಗತ್ಯವಿರುವ ವನ್ಯಪ್ರಾಣಿಗಳನ್ನು ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನ, ಬೆಂಗಳೂರು (Bannerghatta Zoological Park) ಅಥವಾ ಕೂರ್ಗಳ್ಳಿ ಪುನರ್ವಸತಿ ಕೇಂದ್ರ ಮೈಸೂರು ಇಲ್ಲಿಗೆ ಸ್ಥಳಾಂತರಿಸಲಾಗುತ್ತಿದೆ. |

**ಸಂಖ್ಯೆ: ಅಪಜೀ 61 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ.ಖಂಡ್ರೆ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.**